## ಕರ್ನಾಟಕ ಸರ್ಕಾರದ ನಡುವಳಿಗಳು

ವಿಷಯ : ಶ್ರೀ ಅಬ್ದುಲ್ ಬಾಷಾ, ಕೆಲಸ ಸಹಾಯಕ (ನಿವೃತ್ತ) ಮತ್ತು ಶ್ರೀ ಮಹ್ಮದ್ ಸಾಲರ್, "ಡಿ" ಗ್ರೂಪ್ (ನಿವೃತ್ತ) ನೌಕರರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 247(ಎ)ರ ಸೌಲಭ್ಯ ಮಂಜೂರು ಮಾಡುವ ಬಗ್ಗೆ-ಆದೇಶ.

ಓದಲಾಗಿದೆ :-1) ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ರವರ ಪತ್ರ ಸಂಖ್ಯೆ : ಮು.ಇಂ./ಪಂ.ರಾ.ಇಂ.ಇ./ಬೆಂ/ಸಿ-9/20/ಅ.ದಾ.ಸೇ.ವೆ/ಪಿಂಚಣಿ/2017-18/1572 ದಿನಾಂಕ 14.06.2017.

2) ಸರ್ಕಾರದ ಆದೇಶ ಸಂಖ್ಯೆ : ಆಇ 4 ಎಸ್‌ಆರ್‌ಎ 2016, ದಿನಾಂಕ 10.04.2017.

*****

ಪ್ರಸ್ತಾವನೆ :-

ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ರವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 14.06.2017ರ ಪತ್ರದ ಜೊತೆ ಈ ಕೆಳಕಂಡ ನಿವೃತ್ತ ನೌಕರರ ಮೂಲ ಸೇವಾ ಪುಸ್ತಕಗಳನ್ನು ಕಳುಹಿಸುತ್ತಾ, ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 247(ಎ)ರನ್ವಯ ಪಿಂಚಣಿ ಉದ್ದೇಶಕ್ಕೆ 2 ವರ್ಷಗಳ ಅರ್ಹತಾದಾಯಕ ಸೇವಾ ಸೌಲಭ್ಯವನ್ನು ನೀಡುವ ಬಗ್ಗೆ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ :-

1) ಶ್ರೀ ಅಬ್ದುಲ್ ಬಾಷಾ, ಕೆಲಸ ಸಹಾಯಕ (ನಿವೃತ್ತ), ಶಹಾಪೂರ
2) ಶ್ರೀ ಮಹ್ಮದ್ ಸಾಲರ್, "ಡಿ" ಗ್ರೂಪ್ ನೌಕರ(ನಿವೃತ್ತ), ಶಹಾಪೂರ.

ಆರ್ಥಿಕ ಇಲಾಖೆಯು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ 10.04.2017ರಂದು ಹೊರಡಿಸಿದ ಆದೇಶದಲ್ಲಿ ಪ್ರಾರಂಭದಲ್ಲಿ ದಿನಗೂಲಿ ಅಥವಾ ಮಿತವೇತನ ಪದವೀಧರರಾಗಿ ಕಾರ್ಯನಿರ್ವಹಿಸಿ, ತದನಂತರ ಸರ್ಕಾರಿ ಸೇವೆಯಲ್ಲಿ ಸಕ್ರಮಗೊಂಡ ನೌಕರರಿಗೂ ಸಹ ನೇರ ನೇಮಕಾತಿಯಿಂದ ನೇಮಕಗೊಂಡ ಇತರೆ ಸರ್ಕಾರಿ ನೌಕರರಿಗೆ ಅನ್ವಯವಾಗುವಂತೆ ಗರಿಷ್ಠ 2 ವರ್ಷಗಳ ಅರ್ಹತಾದಾಯಕ ಸೇವೆಯನ್ನು ಪಿಂಚಣಿ ಉದ್ದೇಶಕ್ಕೆ ಅಧಿಕ ಅರ್ಹತಾದಾಯಕ ಸೇವೆಯಾಗಿ ಪರಿಗಣಿಸಲು ಅನುಮತಿಸಲಾಗಿದೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ಪರಿಶೀಲಿಸಿದೆ. ಮೇಲಿನ ನಿವೃತ್ತ ನೌಕರರ ಪೈಕಿ ಕ್ರಮ ಸಂಖ್ಯೆ (1)ರಲ್ಲಿನ ಶ್ರೀ ಅಬ್ದುಲ್ ಬಾಷಾ, ಕೆಲಸ ಸಹಾಯಕ (ನಿವೃತ್ತ) ರವರು ಮೂಲತಃ ದಿನಗೂಲಿ ಆಧಾರದ ಮೇಲೆ ನೇಮಕಾತಿ ಹೊಂದಿದ ನೌಕರರಾಗಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ, ಕಲಬುರಗಿ ರವರ ದಿನಾಂಕ 20.12.1990ರ ಆದೇಶದ ಪ್ರಕಾರ ದಿನಾಂಕ 01.01.1990ರಿಂದ ಸರ್ಕಾರಿ ಸೇವೆಯಲ್ಲಿ ಸಕ್ರಮಗೊಂಡು ಸೇವೆ ಸಲ್ಲಿಸಿ, ದಿನಾಂಕ 31.05.2014ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುತ್ತಾರೆ. ಸದರಿಯವರು ನಿವೃತ್ತಿ ಹೊಂದುವ ದಿನಾಂಕಕ್ಕೆ ಒಟ್ಟಾರೆ 24 ವರ್ಷ 5 ತಿಂಗಳು ಅರ್ಹತಾದಾಯಕ ಸೇವೆ ಸಲ್ಲಿಸಿರುತ್ತಾರೆ.

ಅದರಂತೆ, ಮೇಲಿನ ಕ್ರಮ ಸಂಖ್ಯೆ (2)ರಲ್ಲಿನ ಶ್ರೀ ಮಹ್ಮದ್ ಸಾಲರ್, "ಡಿ" ಗ್ರೂಪ್ ನೌಕರ (ನಿವೃತ್ತ), ರವರು ಮೂಲತಃ ದಿನಗೂಲಿ ಆಧಾರದ ಮೇಲೆ ನೇಮಕಾತಿ ಹೊಂದಿದ ನೌಕರರಾಗಿದ್ದು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ, ಕಲಬುರಗಿ ಇವರ

...2

ದಿನಾಂಕ 20.12.1990ರ ಆದೇಶದ ಪ್ರಕಾರ 01.01.1990 ರಿಂದ ಸರ್ಕಾರಿ ಸೇವೆಯಲ್ಲಿ ಸಕ್ರಮಗೊಂಡು ಸೇವೆ ಸಲ್ಲಿಸಿ, ದಿನಾಂಕ 31.08.2016ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುತ್ತಾರೆ. ಸದರಿಯವರು ನಿವೃತ್ತಿ ಹೊಂದುವ ದಿನಾಂಕಕ್ಕೆ ಒಟ್ಟಾರೆ 26 ವರ್ಷ 8 ತಿಂಗಳು ಅರ್ಹತಾದಾಯಕ ಸೇವೆ ಸಲ್ಲಿಸಿರುತ್ತಾರೆ.

| ಕ್ರ.ಸಂ. | ಹೆಸರು ಮತ್ತು ಹುಟ್ಟಿದ ದಿನಾಂಕ | ದಿನಗೂಲಿ ನೌಕರನಾಗಿ ಕೆಲಸಕ್ಕೆ ಸೇರಿದ ದಿನಾಂಕ | ಸೇವಾ ಸಕ್ರಮಗೊಂಡ ದಿನಾಂಕ | ಸೇವೆಯಿಂದ ವಯೋನಿವೃತ್ತಿ ಹೊಂದಿದ ದಿನಾಂಕ | ನಿವೃತ್ತಿ ಹೊಂದುವ ದಿನಾಂಕಕ್ಕೆ ಸಲ್ಲಿಸಿರುವ ಒಟ್ಟು ಸೇವೆ |
|---|---|---|---|---|---|
| 1 | ಅಬ್ದುಲ್ ಭಾಷಾ 01.06.1954. | 13.08.1979. | 01.01.1990 | 31.05.2014. | 24 ವರ್ಷ 5 ತಿಂಗಳು |
| 2 | ಮಹ್ಮದ್ ಸಾಲರ್ 07.08.1956. | 01.04.1971 | 01.01.1990 | 31.08.2016 | 26 ವರ್ಷ 8 ತಿಂಗಳು |

ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 247 (ಎ)ರಲ್ಲಿ ಸ್ಪಷ್ಟಪಡಿಸಿರುವಂತೆ ದಿನಗೂಲಿ ಆಧಾರದ ನೌಕರರು ಸೇರಿದಂತೆ 30 ವರ್ಷಗಳ ನಂತರ ನೇಮಕಾತಿ ಹೊಂದಿದ ನೌಕರರಿಗೆ ಗರಿಷ್ಠ 2 ವರ್ಷಗಳ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ನೀಡಲು ಅವಕಾಶ ಇರುತ್ತದೆ. ಆದ್ದರಿಂದ, ಈ ಪ್ರಕರಣದಲ್ಲಿ ಸದರಿ ಇಬ್ಬರೂ ನಿವೃತ್ತ ನೌಕರರಿಗೆ 2 ವರ್ಷಗಳ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಪಿಂಚಣಿ ಉದ್ದೇಶಕ್ಕೆ ನೀಡಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ : ಗ್ರಾಅಪ 188 ಸೇಶಿಕಾ 2017**
**ಬೆಂಗಳೂರು, ದಿನಾಂಕ : 14.07.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರವು ಈ ಕೆಳಕಂಡ ನಿವೃತ್ತ ನೌಕರರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 247(ಎ)ರ ಪ್ರಕಾರ 2 ವರ್ಷಗಳ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಸೇರ್ಪಡೆ ಮಾಡಲು ಮಂಜೂರಾತಿ ನೀಡಿದೆ.

1) ಶ್ರೀ ಅಬ್ದುಲ್ ಬಾಷಾ, ಕೆಲಸ ಸಹಾಯಕ (ನಿವೃತ್ತ), ಶಹಾಪೂರ
2) ಶ್ರೀ ಮಹ್ಮದ್ ಸಾಲರ್, "ಡಿ" ಗ್ರೂಪ್ ನೌಕರ(ನಿವೃತ್ತ), ಶಹಾಪೂರ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ ಆಇ 4 ಎಸ್‌ಆರ್‌ಎ 2016, ದಿನಾಂಕ 10.04.2017ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿರವರಿಗೆ ಪ್ರತ್ಯಾಯೋಜಿಸಿದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶದನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್. ರಂಗನಗೌಡ) 14/07/2017
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು

2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು– ಶ್ರೀ ಅಬ್ದುಲ್ ಬಾಷಾ, ಕೆಲಸ ಸಹಾಯಕ (ನಿವೃತ್ತ) ಮತ್ತು ಶ್ರೀ ಮಹ್ಮದ್ ಸಾಲರ್, ಗ್ರೂಪ್ "ಡಿ" (ನಿವೃತ್ತ) ನೌಕರರ ಮೂಲ ಸೇವಾ ಪುಸ್ತಕಗಳನ್ನು ಇದರೊಂದಿಗೆ ಹಿಂದಿರುಗಿಸಲಾಗಿದೆ. ತಲುಪಿದ್ದಕ್ಕೆ ಸ್ವೀಕೃತಿ ನೀಡುವಂತೆ ಕೋರಿದೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ / ಯಾದಗಿರಿ.
4. ಸಂಬಂಧಿಸಿದ ನಿವೃತ್ತ ನೌಕರರಿಗೆ.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸೇವೆಗಳು–1)
6. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ ) ಇವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
7. ಹೆಚ್ಚುವರಿ ಪ್ರತಿ : ರಕ್ಷಾ ಕಡತ ; ಸೂಚನಾ ಫಲಕ : ಕಂಪ್ಯೂಟರ್ ಸೆಲ್.